# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಬಳ್ಳಾರಿ ಜಿಲ್ಲೆಯ ಕೃಷಿ ಇಲಾಖೆಯಲ್ಲಿ 2004-05ನೇ ಸಾಲಿನಲ್ಲಿ ಕೃಷಿ ಸಾಮಾಗ್ರಿಗಳನ್ನುಖರೀದಿಸುವಲ್ಲಿ ಅವ್ಯವಹಾರ ಎಸಗಿದರೆನ್ನಲಾದ ಆರೋಪಕ್ಕೆ ಸಂಬಂಧಿಸಿದಂತೆ ಶ್ರೀ ಎನ್.ವಿ ಚಂದ್ರಶೇಖರ್ ಅಂದಿನ ಜಂಟಿ ಕೃಷಿ ನಿರ್ದೇಶಕರು ಪ್ರಸ್ತುತ ನಿವೃತ್ತಿ ಮತ್ತಿತರೆ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ -14-ಎ ರನ್ವಯ ಇಲಾಖಾ ವಿಚಾರಣೆಗಾಗಿ ಮಾನ್ಯ ಲೋಕಾಯುಕ್ತರಿಗೆ ವಹಿಸುವ ಬಗ್ಗೆ.

ಓದಲಾಗಿದೆ:-

1) ಅಪರ ನಿಂಬಂಧಕರು, ವಿಚಾರಣೆಗಳು-05, ಕರ್ನಾಟಕ ಲೋಕಾಯುಕ್ತ,ಬೆಂಗಳೂರು ಇವರ ಅ.ಸ.ಪತ್ರ ಸಂ.Compt/LOK/GLV-33/2004/ARE-5, dt:28-05-2014.

ಪ್ರಸ್ತಾವನೆ:-

ಶ್ರೀ ಎ. ಕಾಳಿಯಪ್ಪ ಬಿನ್ ಶ್ರೀ ಎಂ. ಆರ್ಮುಗಂ, ಆದ್ಯಕ್ಷರು, ಕರ್ನಾಟಕ ರಾಜ್ಯ ಕೃಷಿ ಮತ್ತು ತೋಟಗಾರಿಕೆ ನೌಕರರ ಸಂಘ, ಕಂಪ್ಲಿ, ಬಳ್ಳಾರಿ ಜಿಲ್ಲೆ ಇವರು ಶ್ರೀ ಎನ್.ವಿ. ಚಂದ್ರಶೇಖರ್, ಜಂ.ಕೃ.ನಿ. ಬಳ್ಳಾರಿ, ಇವರು ಕೃಷಿ ಸಾಮಗ್ರಿಗಳ ಖರೀದಿಯಲ್ಲಿ ನಿಯಮಗಳನ್ನು ಪಾಲಿಸದೇ ಸುಮಾರು ರೂ.2.50 ಕೋಟಿಗಳನ್ನು ಅವ್ಯವಹಾರ ನಡೆಸಿದ್ದಾರೆಂದು ಮಾನ್ಯ ಲೋಕಾಯುಕ್ತಕ್ಕೆ ದೂರನ್ನು ಸಲ್ಲಿಸಿದ್ದರು.

2. ಈ ದೂರರ್ಜಿಯ ಬಗ್ಗೆ ಮಾನ್ಯ ಲೋಕಾಯುಕ್ತ ಕಛೇರಿಯ ಮುಖ್ಯ ಅಭಿಯಂತರರು, ತಾಂತ್ರಿಕ ಸಲಹಾ ಸಮಿತಿ, ಇವರ ವತಿಯಿಂದ ವಿವರವಾದ ತನಿಖೆ ನಡೆಸಿದಾಗ, ಈ ಪ್ರಕರಣದಲ್ಲಿ ಸುಮಾರು ರೂ.78,970/-ಗಳ ಸರ್ಕಾರದ ಹಣ ದುರುಪಯೋಗವಾಗಿರುವುದು ಹಾಗೂ ಈ ಕೃಷಿ ಸಾಮಗ್ರಿಗಳ ಖರೀದಿಯಲ್ಲಿ ನಿಯಮಗಳನ್ನು ಪಾಲಿಸದೇ ಹಲವಾರು ಅವ್ಯವಹಾರಗಳಿಗೆ ಕಾರಣಕರ್ತರಾಗಿರುವ ಈ ಕೆಳಕಂಡ ಅಧಿಕಾರಿಗಳ/ನೌಕರರ ವಿರುದ್ಧ ಸಕ್ಷಮ ಪ್ರಾಧಿಕಾರವು ಶಿಸ್ತುಕ್ರಮವನ್ನು ಜರುಗಿಸುವಂತೆ ಮಾನ್ಯ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984 ಕಲಂ 12(3)ರನ್ವಯ ಸಲ್ಲಿಸಿದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

1) ಶ್ರೀ ಎನ್. ವಿ. ಚಂದ್ರಶೇಖರ್ ಹಿಂದಿನ ಜಂಟಿ ಕೃಷಿ ನೀರ್ದೇಶಕರು, ಬಳ್ಳಾರಿ
2) ಶ್ರೀ ಗುರುಸಿದ್ದ-ಮೂರ್ತಿ ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಬಳ್ಳಾರಿ
3) ಶ್ರೀ ಗವಿಸಿದ್ದಪ್ಪ ಗಡ್ಡದ್, ಕೃಷಿ ಸಹಾಯಕ, ಬಳ್ಳಾರಿ
4) ಶ್ರೀ ಬಿ.ಸತ್ಯನಾರಾಯಣರಾವ್, ಸಹಾಯಕ ಕೃಷಿ ನೀರ್ದೇಶಕರು, ಬಳ್ಳಾರಿ
5) ಶ್ರೀ ಮಲ್ಲಿಕಾರ್ಜುನ ಗೌಡ, ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಬಳ್ಳಾರಿ
6) ಶ್ರೀ ಎಂ. ಮಹಂತೇಶಪ್ಪ ಸಹಾಯಕ ಕೃಷಿ ನಿರ್ದೇಶಕರು, ಕೂಡ್ಲಿಗಿ, ಬಳ್ಳಾರಿ
7) ಶ್ರೀ ಪಿ.ಎನ್. ಪಾಟೀಲ್, ಸಹಾಯಕ ಕೃಷಿ ನಿರ್ದೇಶಕರು, ಬಳ್ಳಾರಿ,
8) ಶ್ರೀ ಎಂ. ಥವಣಪ್ಪ, ಪ್ರಭಾರಿ ತಾಂತ್ರಿಕ ಸಹಾಯಕರು, ರೈ.ಸಂ.ಕೇಂ. ಹೂವನಹಡಗಲಿ,
9) ಶ್ರೀ ಪಿ. ಬಸವರಾಜಪ್ಪ, ಕೃಷಿ ಸಹಾಯಕ, ರೈ.ಸಂ.ಕೇಂ. ಇಟಗಿ,

10) ಶ್ರೀ ಎ. ದೇವೇಂದ್ರಪ್ಪ, ಪ್ರಭಾರಿ ಕೃಷಿ ಅಧಿಕಾರಿ,
11) ಶ್ರೀ ಸಿ. ಮೆಹಬೂಬ್, ಕೃಷಿ ಸಹಾಯಕ,
12) ಶ್ರೀ ಎಂ.ಬಿ. ಬಿಸ್ತಿ ಸಹಾಯಕ ಕೃಷಿ ಅಧಿಕಾರಿ ಸಹಾಯಕ ಕೃಷಿ ನೀರ್ದೇಶಕರು, ಕೂಡ್ಲಿಗಿ

3. ಮುಂದುವರಿದು, ಮೇಲ್ಕಂಡ ಆಪಾದಿತರ ಪೈಕಿ ಶ್ರೀ ಎನ್.ವಿ. ಚಂದ್ರಶೇಖರ್, ಜಂಟಿ ಕೃಷಿ ನಿರ್ದೇಶಕರು, ಶ್ರೀ ಬಿ. ಸತ್ಯನಾರಾಯಣರಾವ್, ಶ್ರೀ ಎಂ.ಬಿ. ಬಿಸ್ತಿ, ಶ್ರೀ ಎ. ದೇವೇಂದ್ರಪ್ಪ, ಮತ್ತು ಶ್ರೀ ಸಿ. ಮೆಹಬೂಬ್, ಇವರುಗಳು ಸೇವೆಯಿಂದ ನಿವೃತ್ತರಾಗಿರುವುದರಿಂದ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವನ್ನು ವಸೂಲಿ ಮಾಡಲು ಅನುವಾಗುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214ರನ್ವಯ ಕ್ರಮ ಜರುಗಿಸುವಂತೆ ಶಿಫಾರಸ್ಸು ಮಾಡುತ್ತಾ, ಕೈಗೊಂಡಿರುವ ಕ್ರಮದ ಬಗ್ಗೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(4)ರನ್ವಯ 3 ತಿಂಗಳೊಳಗಾಗಿ ವರದಿಯನ್ನು ಸಲ್ಲಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

4. ಈ ಪ್ರಕರಣದಲ್ಲಿ ಮಾನ್ಯ ಲೋಕಾಯುಕ್ತರಿಂದ ವಿವರವಾದ ತನಿಖೆ ನಡೆದಿರುವುದರಿಂದ ಇಲಾಖಾ ವಿಚಾರಣೆಗೆ/ಶಿಸ್ತು ಕ್ರಮಕ್ಕೆ ಅಗತ್ಯವಾದ ಎಲ್ಲಾ ದಾಖಲೆಗಳು ಅವರ ಕಛೇರಿಯಲ್ಲಿಯೇ ಲಭ್ಯವಿರುವುದರಿಂದ ಮೇಲ್ಕಂಡ ಆಪಾದಿತರ ವಿರುದ್ಧ ಮಾನ್ಯ ಲೋಕಾಯುಕ್ತ ವತಿಯಿಂದಲೇ ಇಲಾಖಾ ವಿಚಾರಣೆ ನಡೆಸಲು ಅನುವಾಗುವಂತೆ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎರನ್ವಯ ಇಲಾಖಾ ವಿಚಾರಣೆಗಾಗಿ ಮಾನ್ಯ ಲೋಕಾಯುಕ್ತರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ:ಕೃಇ 44 ಕೃಪವಿ 2014</u>**
**<u>ಬೆಂಗಳೂರು, ದಿನಾಂಕ: 05-12-2014.</u>**

5. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2004-05ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ಕೃಷಿ ಇಲಾಖೆಯಲ್ಲಿ ಕೃಷಿ ಸಾಮಾಗ್ರಿಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಅನುವಾಗುವಂತೆ ಇಲಾಖಾ ವಿಚಾರಣೆಗಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎರನ್ವಯ ಪ್ರಕರಣವನ್ನು ಮಾನ್ಯ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

1) ಶ್ರೀ ಎನ್. ವಿ. ಚಂದ್ರಶೇಖರ್, ಹಿಂದಿನ ಜಂಟಿ ಕೃಷಿ ನೀರ್ದೇಶಕರು, ಬಳ್ಳಾರಿ, ಪ್ರಸ್ತುತ ನಿವೃತ್ತ,
2) ಶ್ರೀ ಗುರುಸಿದ್ದ ಮೂರ್ತಿ ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಬಳ್ಳಾರಿ,
3) ಶ್ರೀ ಗವಿಸಿದ್ದಪ್ಪ ಗಡ್ಡದ್, ಕೃಷಿ ಸಹಾಯಕ, ಬಳ್ಳಾರಿ,
4) ಶ್ರೀ ಬಿ.ಸತ್ಯನಾರಾಯಣರಾವ್, ಸಹಾಯಕ ಕೃಷಿ ನೀರ್ದೇಶಕರು, ಬಳ್ಳಾರಿ,
5) ಶ್ರೀ ಮಲ್ಲಿಕಾರ್ಜುನ ಗೌಡ, ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಬಳ್ಳಾರಿ,
6) ಶ್ರೀ ಎಂ. ಮಹಂತೇಶಪ್ಪ ಸಹಾಯಕ ಕೃಷಿ ನಿರ್ದೇಶಕರು, ಕೂಡ್ಲಿಗಿ, ಬಳ್ಳಾರಿ,
7) ಶ್ರೀ ಪಿ.ಎನ್. ಪಾಟೀಲ್, ಸಹಾಯಕ ಕೃಷಿ ನಿರ್ದೇಶಕರು, ಬಳ್ಳಾರಿ,
8) ಶ್ರೀ ಎಂ. ಥವಣಪ್ಪ, ಪ್ರಭಾರಿ ತಾಂತ್ರಿಕ ಸಹಾಯಕರು, ರೈ.ಸಂ.ಕೇಂ. ಹೂವನಹಡಗಲಿ,
9) ಶ್ರೀ ಪಿ. ಬಸವರಾಜಪ್ಪ, ಕೃಷಿ ಸಹಾಯಕ, ರೈ.ಸಂ.ಕೇಂ. ಇಟಗಿ,
10) ಶ್ರೀ ಎ. ದೇವೇಂದ್ರಪ್ಪ, ಪ್ರಭಾರಿ ಕೃಷಿ ಅಧಿಕಾರಿ,

11) ಶ್ರೀ ಸಿ. ಮೆಹಬೂಬ್, ಕೃಷಿ ಸಹಾಯಕ, ಹೂವಿನಹಡಗಲಿ,
12) ಶ್ರೀ ಎಂ.ಬಿ. ಬಿಸ್ತಿ ಸಹಾಯಕ ಕೃಷಿ ಅಧಿಕಾರಿ ಸಹಾಯಕ ಕೃಷಿ ನಿರ್ದೇಶಕರು, ಕೂಡ್ಲಿಗಿ.

6. ಮೇಲ್ಕಂಡ ಆಪಾದಿತರ ಪೈಕಿ ಸೇವೆಯಿಂದ ನಿವೃತ್ತರಾಗಿರುವ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)(i)ರನ್ವಯ ಸರ್ಕಾರದ ಮಂಜೂರಾತಿ ನೀಡಲಾಗಿದೆ.

1) ಶ್ರೀ ಎನ್. ವಿ. ಚಂದ್ರಶೇಖರ್, ಅಂದಿನ ಜಂಟಿ ಕೃಷಿ ನೀರ್ದೇಶಕರು, ಬಳ್ಳಾರಿ, ಪ್ರಸ್ತುತ ನಿವೃತ್ತ,
2) ಶ್ರೀ ಬಿ.ಸತ್ಯನಾರಾಯಣರಾವ್, ಅಂದಿನ ಸಹಾಯಕ ಕೃಷಿ ನೀರ್ದೇಶಕರು, ಬಳ್ಳಾರಿ, ಪ್ರಸ್ತುತ ನಿವೃತ್ತ,
3) ಶ್ರಿ ಪಿ. ಬಸವರಾಜಪ್ಪ, ಅಂದಿನ ಸಕೃಅ. ಸಹಾಯ್ಕಕ ಕೃಷಿ- ನಿರ್ದೇಶಕರ ಕಛೇರಿ, ಹೂವಿನಹಡಗಲಿ, ಪ್ರಸ್ತುತ ನಿವೃತ್ತ
4) ಶ್ರೀ ದೇವೇಂದ್ರಪ್ಪ, ಅಂದಿನ ಸಕೃಅ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ, ಪ್ರಸ್ತುತ ನಿವೃತ್ತ,
5) ಶ್ರೀ ಸಿ. ಮೆಹಬೂಬ್ ಸಾಬ್, ಅಂದಿನ ಕೃಷಿ ಸಹಾಯಕ, ಹೂವಿನಹಡಗಲಿ,ಪ್ರಸ್ತುತ ನಿವೃತ್ತ,
6) ಶ್ರೀ ಎಂ.ಬಿ.ಬಿಸ್ತಿ, ಅಂದಿನ ಸಹಾಯಕ ಕೃಷಿ ಅಧಿಕಾರಿ, ಕೂಡ್ಲಗಿ, ಪ್ರಸ್ತುತ ನಿವೃತ್ತ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಆರ್. ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ
(ಸೇವೆಗಳು ಮತ್ತು ಸಮನ್ವಯ)

ಇವರಿಗೆ:-

1) ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ ಜಿಇ-05) ಕರ್ನಾಟಕ, ಬೆಂಗಳೂರು.
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಅಪರ ನಿಬಂಧಕರು ವಿಚಾರಣೆಗಳು-05 ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
5) ಜಂಟಿ ಕೃಷಿ ನಿರ್ದೇಶಕರು, ಬಳ್ಳಾರಿ ಜಿಲ್ಲೆ.
6) ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
8) ಸಂಬಂಧಪಟ್ಟ ಅಧಿಕಾರಿಗಳಿಗೆ (ಕೃಷಿ ಆಯುಕ್ತರ ಮೂಲಕ)
9) ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.